# ಜಾಹ್ನವಿ ರಂಗಪ್ರವೇಶ ಸದ್ಯಕ್ಕಿಲ್ಲ

ಶ್ರೀದೇವಿ ಮಗಳು ಜಾಹ್ನವಿ ಕಪೂರ್ ಸಿನಿಮಾ ರಂಗಕ್ಕೆ ಕಾಲಿಡುತ್ತಾಳೆ ಎಂಬ ಸುದ್ದಿ ವರ್ಷಗಳಿಂದ ಕೇಳಿಬರುತ್ತಿದೆ. ಅದು ಆಗ– ಈಗ ಎನ್ನುತ್ತಿದ್ದರೂ ಜಾಹ್ನವಿ ಬಣ್ಣಹಚ್ಚಲೇ ಇಲ್ಲ, ಸುದ್ದಿಯೂ ನಿಲ್ಲಲಿಲ್ಲ. ಮಗಳು ಸಿನಿಮಾಕ್ಕೆ ಸದ್ಯಕ್ಕಂತೂ ಕಾಲಿಡುವುದಿಲ್ಲ ಎಂದು ಗಾಳಿಮಾತುಗಳಿಗೆ ಸ್ಪಷ್ಟನೆ ನೀಡಿದ್ದಾರೆ ಆಕೆಯ ಅಮ್ಮ ಶ್ರೀದೇವಿ.



'ಮಗಳು ಈಗಷ್ಟೇ ಪದವಿ ಮುಗಿಸಿದ್ದಾಳೆ. ಸದ್ಯ ಆಕೆಯ ಗಮನ ಶಿಕ್ಷಣದ ಕಡೆಗಷ್ಟೇ. ಆಕೆಯ ಸಿನಿಮಾ ಪ್ರವೇಶದ ಕುರಿತು ಇದುವರೆಗೆ ಬಂದಿರುವ ವರದಿಗಳೆಲ್ಲವೂ ವಿರೋಧಾಭಾಸದಿಂದ ಕೂಡಿವೆ. ಆಕೆ ಯಾವ ಸಿನಿಮಾಕ್ಕೂ ಸಹಿ ಹಾಕಿಲ್ಲ. ಆಕೆ ಇನ್ನೂ ಚಿಕ್ಕವಳು, ಇಷ್ಟು ಬೇಗ ನಟನೆಗಿಳಿಯುವ ಬಗ್ಗೆ ಯೋಚನೆಯೇ ಇಲ್ಲ' ಎನ್ನುವುದು ಅಮ್ಮನ ಮಾತು.

'ಅವಳು ನಟಿಯಾಗಬೇಕೆಂದಿದ್ದರೆ, ಖಂಡಿತಾ ಆಗೇ ಆಗುತ್ತಾಳೆ. ನಾನೂ ನಟಿಯಾಗಬೇಕು ಎಂದುಕೊಂಡಿರಲಿಲ್ಲ' ಎಂದಿದ್ದಾರೆ ಶ್ರೀದೇವಿ. 'ಬಾಹುಬಲಿ' ಮತ್ತು 'ಬಜರಂಗಿ ಭಾಯಿಜಾನ್' ಮುಂತಾದ ಸಿನಿಮಾಗಳಿಗೆ ಕಥೆ ಹೆಣೆದಿರುವ ಕೆ.ವಿ. ವಿಜಯೇಂದ್ರ ಪ್ರಸಾದ್ ಅವರ ನಿರ್ದೇಶನದ ಮೊದಲ ಮಲಯಾಳಂ ಸಿನಿಮಾದಲ್ಲಿ ದಲ್ಕುರ್ ಸಲ್ಮಾನ್ ಎದುರು ಜಾಹ್ನವಿ ನಟಿಸುತ್ತಾಳೆ ಎನ್ನಲಾಗುತ್ತಿತ್ತು. ಇದೆಲ್ಲಾ ಸುಳ್ಳು ಎಂದು ಸರಾಸಗಟಾಗಿ ವರದಿಗಳನ್ನು ತಳ್ಳಿಹಾಕಿದ್ದಾರೆ ಶ್ರೀದೇವಿ. ಈಗ ಮಗಳದ್ದೇನಿದ್ದರೂ ಓದಿನೆಡೆಗೆ ಗಮನ. ಸಿನಿಮಾ ಬಗ್ಗೆ ಚಿಂತಿಸುವ ವಯಸ್ಸೂ ಆಕೆಯದ್ದಲ್ಲ. ಆಕೆ ನಟಿಸಬೇಕೋ ಬೇಡವೋ ಎನ್ನುವುದನ್ನು ಕಾಲವೇ ನಿರ್ಧರಿಸುತ್ತದೆ ಎಂದಿದ್ದಾರೆ ಅವರು. ಮಗಳ ಸಿನಿಮಾಯಾನದ ವದಂತಿಗಳಿಗೆ ಸ್ಪಷ್ಟನೆ ನೀಡಿರುವ ಶ್ರೀದೇವಿ, ತಮ್ಮ ತಮಿಳು ಸಿನಿಮಾ 'ಪುಲಿ'ಯ ಬಿಡುಗಡೆಗೆ ಕಾತರರಾಗಿದ್ದಾರೆ.



# ಪ್ರೀತಿ ವಿಚಾರದಲ್ಲಿ ಸೋನಂ ಗಪ್‌ಚುಪ್!

'ಸಿನಿಮಾ ಕುರಿತು ಎಷ್ಟು ಬೇಕಾದರೂ ಮಾತನಾಡುತ್ತೇನೆ. ಆದರೆ ಖಾಸಗಿ ಬದುಕಿನ ಬಗ್ಗೆ ತುಟಿ ಬಿಚ್ಚಲಾರೆ'– ಇದು ಸೋನಂ ಕಪೂರ್ ಅಳವಡಿಸಿಕೊಂಡಿರುವ ಕಟ್ಟುನಿಟ್ಟಿನ ನೀತಿ.

ಸಿನಿಮಾ ರಂಗಕ್ಕೆ ಬಂದಾಗಿನಿಂದಲೂ ತನ್ನ ಖಾಸಗಿ ಬದುಕಿನ ಗುಟ್ಟನ್ನು ಕಾಪಿಟ್ಟುಕೊಂಡು ಬಂದಿರುವುದಾಗಿ ಸೋನಂ ಹೇಳಿಕೊಂಡಿದ್ದಾಳೆ. ಮುಂದೆಯೂ ಹಾಗೆಯೇ ಇರುವುದು ಆಕೆಯ ಅಚಲ ನಿರ್ಧಾರ.

'ನಾನು ನನ್ನ ಸಂಬಂಧಗಳ ಕುರಿತು ಮಾಧ್ಯಮಗಳೊಂದಿಗೆ ಮಾತನಾಡುವುದಿಲ್ಲ. ಅದು ಸೂಕ್ತವೆಂದು ನಾನು ಭಾವಿಸುವುದೂ ಇಲ್ಲ. ಹೀಗೆ ಮಾತನಾಡಲು ನನಗೆ ಅಂಜಿಕೆ ಇದೆ ಎಂದರ್ಥವಲ್ಲ. ಆದರೆ ಸಂಬಂಧಗಳ ಕುರಿತು ಪತ್ರಿಕೆಗಳೊಂದಿಗೆ ಮಾತನಾಡುವುದಕ್ಕೆ ನಾನು ಸಂಪೂರ್ಣ ವಿರುದ್ಧವಾಗಿದ್ದೇನೆ. ಏಕೆಂದರೆ, ಇದು ನನ್ನ ಕೆಲಸದ ಮೇಲಿನ ಗಮನವನ್ನು ಬೇರೆಡೆಗೆ ಸೆಳೆಯುತ್ತದೆ. ಅದರಿಂದ ವೃತ್ತಿಯ ಮೇಲೆ ಪರಿಣಾಮ ಉಂಟಾಗುತ್ತದೆ' ಎಂದಿದ್ದಾಳೆ ಸೋನಂ.

ಮುಚ್ಚುಮರೆಯಿಲ್ಲದೆ ನೇರವಾಗಿ ಮಾತನಾಡುವುದಕ್ಕೆ ಸೋನಂ ಹೆಸರುವಾಸಿ. ಅದರಲ್ಲಿ ಆಕೆಯಲ್ಲಿ ಮುಚ್ಚುಮರೆಯಿಲ್ಲ. ಹಾಗೆಂದು ತನ್ನ ಪ್ರೀತಿ ಪ್ರೇಮ, ಸಂಬಂಧಗಳ ಕುರಿತು ಸಹ ಅದೇ ರೀತಿ ಮಾತನಾಡಲು ಆಕೆ ಸಿದ್ಧಳಿಲ್ಲ. ಸಿನಿಮಾದಾಚೆಗಿನ ಖಾಸಗಿ ಬದುಕು ಹಂಚಿಕೊಳ್ಳುವುದು ಥರವಲ್ಲ ಎನ್ನುವುದು ಆಕೆಯ ನಿಯಮ. ಈ ನಿಲುವನ್ನು ನನ್ನ ವೃತ್ತಿಯ ಆರಂಭದಲ್ಲಿಯೇ ಅಳವಡಿಸಿಕೊಂಡಿದ್ದೇನೆ. ನನ್ನ ಬದುಕಿನಲ್ಲಿ ಯಾರಿದ್ದಾರೆ, ನನ್ನ ಖಾಸಗಿ ಬದುಕು ಹೇಗಿದೆ ಎಂಬುದರ ಕುರಿತು ಎಂದೂ ಮಾತನಾಡಿಲ್ಲ. ಆಡುವುದೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾಳೆ.

ಸೋನಂ ಇತ್ತೀಚೆಗೆ 'ಬ್ರೇಕ್‌ಅಪ್'ಗಳ ಕುರಿತ ವಿಶಿಷ್ಟ ವಿಡಿಯೊದಲ್ಲಿ ಕಾಣಿಸಿಕೊಂಡಿದ್ದಾಳೆ. ಬ್ರೇಕ್‌ಅಪ್‌ನ ಸಾಧಕ ಬಾಧಕಗಳ ಕುರಿತು ಬೇಕಾದರೆ ಸಲಹೆ ನೀಡಬಲ್ಲೆ ಎನ್ನುತ್ತಾಳೆ ಸೋನಂ.

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65